ಶ್ರೀ ಹೆಚ್. ಡಿ. ದೇವೇಗೌಡ.—ಅವರ ಸ್ವಂತ ಕಾನ್ಸ್ಟ್ಟ್ಯುಯನ್ಸಿಯಲ್ಲಿ ಸರ್‌ಪ್ರೈಸ್ ಚೆಕ್ ಮಾಡಲಿಲ್ಲ. ಅವರ ತಾಲ್ಲೂಕಿನಲ್ಲಿ, ಅವರ ಜಿಲ್ಲೆಯಲ್ಲಿ ಸರ್‌ಪ್ರೈಸ್ ಚೆಕ್ ಮಾಡಿದ್ದೇನೆ. ನಮ್ಮ ತಾಲ್ಲೂಕಿನಲ್ಲಿ ಅನಿರೀಕ್ಷಿತವಾಗಿ ಕೆಲವು ಗಜನಿ ಒಡ್ಡುಗಳನ್ನು ಮಾಡುವುದು ಬೇರೆ. ಒಂದೊಂದು ತಾಲ್ಲೂಕಿನಲ್ಲಿ ನೇಚರ್ ಆಫ್ ವರ್ಕ್ ಅನ್ನು ಸೆಲೆಕ್ಟ್ ಮಾಡಿಕೊಂಡು ಮಾಡಿದ್ದೇವೆ. ಇಲ್ಲದಿದ್ದರೆ, ಕೆ.ಎಸ್.ಆರ್.ಟಿ.ಸಿ. ಬಸ್ ಚೆಕ್ ಮಾಡಿದ ಹಾಗೆ ಆಗುತ್ತದೆ. ನೀವು ಏನು ಹೇಳ್ದ್ದೀರಿ, ಅದನ್ನು ಗಮನದಲ್ಲಿಟ್ಟುಕೊಂಡು, ಇದರಲ್ಲಿ ಏನೇನು ದೋಷಗಳಿವೆ, ಅದನ್ನು ಸರಿಪಡಿಸಲು ಪ್ರಯತ್ನ ಮಾಡುತ್ತೇನೆ.

## ಬೆಳ್ತಂಗಡಿ ತಾಲೂಕಿನಲ್ಲಿ 1985-86ನೇ ಸಾಲಿನಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಹೊಸ ಕಾಮಗಾರಿಗಳ ವಿಚಾರ ಕುರಿತು.

೫೯೨ ಶ್ರೀ ವಸಂತ ಬಂಗೇರಾ (ಬೆಳ್ತಂಗಡಿ)—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ.—

ಅ) ಬೆಳ್ತಂಗಡಿ ತಾಲೂಕಿನಲ್ಲಿ ೧೯೮೫-೮೬ನೇ ಸಾಲಿನಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಹೊಸ ಕಾಮಗಾರಿಗಳು ಯಾವುವು ;

ಆ) ಬೆಳ್ತಂಗಡಿ ತಾಲ್ಲೂಕು ಆರಂಬೋಡಿ ಗ್ರಾಮಕ್ಕೆ ಹೋಗಲು ನಿರ್ಮಾಣವಾಗಲಿರುವ ಸೇತುವೆಯ ಕೆಲಸ ವಿಳಂಬವಾಗಿರುವುದಕ್ಕೆ ಕಾರಣಗಳೇನು ? ಸೇತುವೆಯ ಕೆಲಸ ಯಾವಾಗ ಪೂರ್ಣಗೊಳ್ಳುವುದು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ರಸ್ತೆ ಮತ್ತು ಸೇತುವೆಗಳ ಯಾವ ಹೊಸ ಕೆಲಸವನ್ನು ೧೯೮೫-೮೬ರ ಆಯವ್ಯಯ ಪಟ್ಟಿಯಲ್ಲಿ ಸೇರಿಸಿಲ್ಲ. ಆದರೆ ಸೇತು ಬಂಧನ ಯೋಜನೆಯಲ್ಲಿ ಒಂದು ಅಥವಾ ಎರಡು ಸಣ್ಣ ಮೋರಿಗಳನ್ನು ಈ ತಾಲ್ಲೂಕಿನಲ್ಲೂ ತೆಗೆದುಕೊಳ್ಳಲಾಗುತ್ತದೆ.

ಆ) ಈ ಸೇತುವೆಯ ಕೆಲಸವು ಪ್ರಗತಿಯಲ್ಲಿದ್ದು, ೧೯೮೬-೮೭ರಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಶ್ರೀ ಹೆಚ್. ಡಿ. ದೇವೇಗೌಡ.—ಅವರು ಕೇಳತಕ್ಕಂತಹ ಸೇತುವೆ ಕೆಲಸ ಪ್ರಾರಂಭ ಮಾಡಿದ್ದು ೫-೧-೧೯೮೪ರಲ್ಲಿ. ಅದಕ್ಕೆ ಈಗಾಗಲೇ ೭ ಲಕ್ಷದ ರೂಪಾಯಿಗಳ ಮೇಲೆ ಖರ್ಚು ಮಾಡಿದ್ದೇವೆ. ಮೇ ೧೯೮೬ಕ್ಕೆ ಈ ಕೆಲಸವನ್ನು ಮುಗಿಸಹೇಕೆಂದಿದ್ದೇವೆ. ಅದಕ್ಕೆ ಅಂದಾಜು ಸುಮಾರು ೨೧ ಲಕ್ಷ ಎಂದು ಇದೆ. ನಮ್ಮ ಎಕ್ಸ್‌ಪೆಕ್ಟೇಷನ್ ಪ್ರಕಾರ ಹಣ ಸಿಕ್ಕಿದರೆ, ಅದಕ್ಕಿಂತ ಮುಂಚೆಯೇ ಈ ಕೆಲಸವನ್ನು ಪೂರೈಸುತ್ತೇವೆ. ಹಣ ಸಿಕ್ಕದೇ ಹೋದರೆ, ಕೊಂಚ ಹಿಂದೂ ಮುಂದು ಹೋಗಬಹುದು.

ಶ್ರೀ ಕೆ. ವಸಂತ ಬಂಗೇರ.—ಒಂದನೆಯ ಪ್ರಶ್ನೆಗೆ ೧೯೮೫-೮೬ರ ಆಯವ್ಯಯ ಪತ್ರದಲ್ಲಿ ಯಾವುದೇ ಕಾಮಗಾರಿ ಯೋಜನೆಯನ್ನು ಸೇರಿಸಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಇದೇ ವರ್ಷ ಎರಡು ಮೋರಿಗಳನ್ನು ನಮ್ಮ ಕ್ಷೇತ್ರದಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಕಳೆದ ವರ್ಷದ ಬಜೆಟ್‌ನಲ್ಲಿ ಸೇರಿಸಿದ ಎಲ್ಲಾ ಕಾಮಗಾರಿಗಳನ್ನು ಈ ವರ್ಷ ಸೇರಿಸುತ್ತೀರೆಂಬ ಅಭಿಪ್ರಾಯವಿಟ್ಟಿದ್ದೆ. ಈ ವರ್ಷ ಯಾವ ಹೊಸ ಕಾಮಗಾರಿಗಳನ್ನು ಸೇರಿಸುತ್ತೀರೆಂದು ಕೇಳಿದ್ದೆ. ಅದಕ್ಕೆ ಅವರು ಹಿಂದಿನದು ಇಲ್ಲ. ಈ ವರ್ಷ ಎರಡು ಮೋರಿಗಳನ್ನು ತೆಗೆದುಕೊಳ್ಳಲಾಗುವುದೆಂದು ಇದೆ ಕಳೆದ ಒಡ್ಡೆಟ್ಟಿನಲ್ಲಿ ಕೆಲವು ಕಾಮಗಾರಿಗಳಿಗೆ ಒಂದು ಸಾವಿರ ಟೋಕನ್ ಗ್ರಾಂಟ್ ಕೊಟ್ಟಿದ್ದಾರೆ. ಕೆಲವು ಕಡೆ ೫, ೧೦ ಸಾವಿರ ಮತ್ತು ಎರಡು ಲಕ್ಷ ಕೊಟ್ಟಿದ್ದಾರೆ. ನಮ್ಮ ಕ್ಷೇತ್ರದಲ್ಲಿ ಯಾವುದೇ ಕೆಲಸವಾಗದೆ ವಂಚಿತವಾಗಿದೆ. ಇದರ ಬಗ್ಗೆ ಬೇರೆ ಏನಾದರೂ ಯೋಜನೆಯನ್ನು ಹಾಕಿಕೊಂಡು ಈ ವರ್ಷ ಹೆಚ್ಚಿನ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ. ಪ್ರಶ್ನೆ ಬಳಹ ಸ್ಪಷ್ಟವಾಗಿದೆ. ೧೯೮೫-೮೬ನೇ ಇಸವಿಯಲ್ಲಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ಕೈಗೊಂಡ ಹೊಸ ಕಾಮಗಾರಿಗಳು ಯಾವುವೂ ಇಲ್ಲ. ಹೋದ ವರ್ಷ ಯಾವ ಕೆಲಸವನ್ನು ತೆಗೆದುಕೊಂಡಿದ್ದೇವೆ ಎಂಬುದಕ್ಕೆ ಉತ್ತರ ತರಿಸಿ ಕೊಡುತ್ತೇನೆ. ಈ ವರ್ಷ ಹೊಸ ಕಾಮಗಾರಿಗಳನ್ನು ಸೇತು ಬಂಧನ ಯೋಜನೆಯಲ್ಲಿ ಕೆಲವು ತಾಲ್ಲೂಕನ್ನು ತೆಗೆದುಕೊಳ್ಳಬೇಕೆಂದು ಸರ್ಕಾರ ಆಲೋಚನೆ ಮಾಡುತ್ತಿದೆ. ನಿಮ್ಮ ಎರಡನೆಯ ಪ್ರಶ್ನೆಯನ್ನು ತಾವೇ ಓದಿ. ನಾವು ಅದನ್ನು ವಿರೂಪಗೊಳಿಸಲಿಕ್ಕೆ ಹೋಗಿಲ್ಲ. ಬೆಳ್ತಂಗಡಿ ತಾಲ್ಲೂಕಿನಲ್ಲಿ ಅರಂಬೋಡಿ ಗ್ರಾಮಕ್ಕೆ ಹೋಗಲು ನಿರ್ಮಿಸಲಿರುವ ಸೇತುವೆಗೆ ೨೧ ಲಕ್ಷಗಳನ್ನು ಮಂಜೂರು ಮಾಡಿದ್ದೇವೆ. ೭ ಲಕ್ಷ ರೂಪಾಯಿಗಳನ್ನು ಈ ವರ್ಷದಲ್ಲಿ ಖರ್ಚು ಮಾಡಿದ್ದೇವೆ. ೧೯೮೬ನೇ ಮೇ ತಿಂಗಳಲ್ಲಿ ಇದನ್ನು ಪೂರ್ಣಗೊಳಿಸಬೇಕೆಂದು ಸರ್ಕಾರದ ಆಸೆ ಇದೆ. ಹಣದ ಪರಿಸ್ಥಿತಿ ನೋಡಬೇಕಾಗಿದೆ. ಇನ್ನು ೧೪ ಲಕ್ಷವನ್ನು ಇದಕ್ಕೆ ಖರ್ಚು ಮಾಡಬೇಕಾಗಿದೆ. ಹಣದ ಆತಂಕ ಇಲ್ಲದೆ, ಹಣ ಸಿಕ್ಕಿದರೆ, ಜೋರಾಗಿ ಕೆಲಸ ಮಾಡುತ್ತೇವೆ. ಇಲ್ಲದಿದ್ದರೆ ಸ್ವಲ್ಪ ಹಿಂದು ಮುಂದು ಆಗುತ್ತದೆ.

ಶ್ರೀ ಕೆ. ವಸಂತ ಬಂಗೇರ.—ರಾಜ್ಯದಲ್ಲಿ ಅತಿ ದೊಡ್ಡ ಪ್ರದೇಶ. ಇದು ೮೧ ಗ್ರಾಮಗಳನ್ನು ಹೊಂದಿದೆ. ಅನೇಕ ಕುಗ್ರಾಮಗಳನ್ನು ಹೊಂದಿದೆ. ಅನೇಕ ಹಳ್ಳಿ ನಾಲೆ, ತೋಟ, ಗುಡ್ಡಗಾಡುಗಳಿಂದ ಕೂಡಿದ ಪ್ರದೇಶ, ಮಲೆನಾಡು ಪ್ರದೇಶ, ಈ ಬೆಳ್ತಂಗಡಿ ಕ್ಷೇತ್ರ ? ಈ ವರ್ಷ ಈ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಆದ್ದರಿಂದ ಇನ್ನೂ ಕೆಲವು ಕಾಮಗಾರಿಗಳನ್ನು ಕೊಡುತ್ತೀರಾ ಎಂದು ಕೇಳಿಕೊತ್ತೇನೆ. ಅರಂಬೋಡಿ ಸೇತುವೆಯನ್ನು ೧೯೮೬-೮೭ರಲ್ಲಿ ಪೂರ್ತಿ ಮಾಡುತ್ತೇವೆಂದು ಹೇಳಿದ್ದೀರಿ. ಸೇತುವೆ ಆದರೆ ಸಾಲದು. ಅಲ್ಲಿ ಅಪ್ರೋಚ್ ರೋಡ್ ಇಲ್ಲ. ಈ ವರ್ಷ ಅಪ್ರೋಚ್ ರೋಡನ್ನು ಮಾಡುತ್ತೀರಾ ? ಆರ್.ಎಲ್.ಇ.ಜಿ.ಪಿ ಸ್ಕೀಮಿನ ಪ್ರಕಾರ, ೧೨ ಕಾಮಗಾರಿಗಳನ್ನು ಸ್ಯಾಂಕ್ಷನ್ ಮಾಡಲು ಸರ್ಕಾರಕ್ಕೆ ಬರೆದುಕಳಿಸಿದ್ದಾರೆ. ಆ ಹತ್ತು ಕಾಮಗಾರಿಗಳನ್ನು ಕೊಡುತ್ತೀರಾ ಎಂದು ನಾನು ಕೇಳುತ್ತೇನೆ.

ಶ್ರೀ ಹೆಚ್ ಡಿ. ದೇವೇಗೌಡ.—ಆರ್.ಎಲ್.ಇ.ಜಿ.ಪಿ. ಸ್ಕೀಮಿನ ಪ್ರಕಾರ ೧೦ ಕಾಮಗಾರಿಗಳನ್ನು ಸ್ಯಾಂಕ್ಷನ್ ಮಾಡಲು ಸರ್ಕಾರಕ್ಕೆ ಬಂದಿದೆಯೆಂದು ಹೇಳುತ್ತಿದ್ದಾರೆ. ದುಡ್ಡು ಇದ್ದರೆ, ಮಂಜೂರು ಮಾಡುತ್ತೇವೆ. ಇಲ್ಲದಿದ್ದರೆ ಇಲ್ಲ.

## ಪ್ರಶ್ನೆ ೪೦೨ (೮೮೮)

ಶ್ರೀ ಆರ್. ನಾರಾಯಣಪ್ಪ

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

## ಬೆಂಗಳೂರು ನಗರದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳ ಕುರಿತು

೧೦೨೮ ಶ್ರೀಮತಿ ಶಿವಕಾಂತಾ ಜೈರಾಜ್ ಚತುರೆ (ಶಾಸಕರು).—

ಅ) ಬೆಂಗಳೂರು ನಗರದಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಬಂದು ವ್ಯಾಸಂಗ ಮಾಡುತ್ತಿರುವ ಹರಿಜನ ಗಿರಿಜನ ವಿದ್ಯಾರ್ಥಿಗಳಿಗಾಗಿ ಎಷ್ಟು ವಿದ್ಯಾರ್ಥಿ ನಿಲಯಗಳನ್ನು ಸ್ಥಾಪನೆ ಮಾಡಲಾಗಿದೆ;

ಆ) ವಿದ್ಯಾರ್ಥಿ ನಿಲಯಗಳು ಇಲ್ಲದಿದ್ದಲ್ಲಿ, ಅವುಗಳನ್ನು ಪ್ರಸ್ತುತ ವರ್ಷದಿಂದ ಪ್ರಾರಂಭಿಸಲಾಗುವುದೇ ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) ೧೭ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು.
೩ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು
೧೨ ಖಾಸಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು

ಆ) ಉದ್ಭವಿಸುವುದಿಲ್ಲ